OS No. 75/2017 PW-**1**

**ದಿನಾಂಕ 17.07.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ**

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ನನ್ನ ತಮ್ಮನಾದ ವಾದಿಯವರು ನನಗೆ ಬರೆದುಕೊಟ್ಟ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಪ್ರತಿವಾದಿ ನನ್ನ ತಮ್ಮ ಟಿ.ವಿ ಕೃಷ್ಣಕುಮಾರ್ ರವರಿಗೆ ಬರೆದುಕೊಟ್ಟ ದಿಃ25.07.2015 ರಂದು ಸ್ವಾದೀನ ರಹಿತ ಶುದ್ದ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ನಿಪಿ-2 ರ ಕರಾರು ಪತ್ರ ಬರೆಯುವ ಸಮಯದಲ್ಲಿ ನಾನು ಹಾಜರಿದ್ದೆ ಮತ್ತು ನಾನು ನನ್ನ ಬ್ಯಾಂಕ್ ಖಾತೆಯಿಂದ ಪ್ರತಿವಾದಿಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಹಣವನ್ನು ವರ್ಗಾವಣೆ ಮಾಡಿರುತ್ತೇನೆ. ಆ ಬಗ್ಗೆ ನಿಪಿ-2 ರಲ್ಲಿ ನಮೂದು ಇದೆ. ಆದ್ದರಿಂದ ನಾನು ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಬಲ್ಲೆ, ಸಾಕ್ಷಿಯು ನಿಪಿ-2 ರಲ್ಲಿರುವ ಪ್ರತಿವಾದಿಯವರ 5 ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಪ್ರತಿವಾದಿಯ 5 ಸಹಿಗಳನ್ನು ಒಟ್ಟಾರೆಯಾಗಿ ನಿಪಿ-2(ಎ) ಎಂದು, ಸದರಿ ದಾಖಲೆಗೆ ನನ್ನ ತಮ್ಮ ವಾದಿಯವರು ಸಹಿಗಳನ್ನು ಮಾಡಿರುತ್ತಾರೆ. ಅವರ ಸಹಿಯನ್ನು ನಾನು ನೋಡಿ ಗುರುತಿಸಬಲ್ಲೆ, ಸಾಕ್ಷಿಯು ವಾದಿಯವರ 6 ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ವಾದಿಯವರ ಸಹಿಗಳನ್ನು ಒಟ್ಟಾರೆಯಾಗಿ ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಹೆಚ್ ಎನ್ ದಯಾನಂದ ಮತ್ತು ಶಿವಮೂರ್ತಿಯವರು ಸಹಿಗಳನ್ನು ಹಾಕಿರುತ್ತಾರೆ ಸಾಕ್ಷಿಯು ಸದರಿ ಅವರುಗಳ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಹೆಚ್ ಎನ್ ದಯಾನಂದ ಮತ್ತು ಶಿವಮೂರ್ತಿಯವರು ಸಹಿಗಳನ್ನು ನಿಪಿ-2(ಸಿ) ಮತ್ತು ನಿಪಿ-2(ಡಿ) ಎಂದು,ಸದರಿ ಪತ್ರವನ್ನು ಎಂ ಎಸ್ ರವಿಶಂಕರ್ ರವರು ಬರೆದಿರುತ್ತಾರೆ ಮತ್ತು ಅವರು ಬಿಕ್ಲಂ ಸಹಿ ಹಾಕಿರುತ್ತಾರೆ. ಸಾಕ್ಷಿಯು ಸದರಿ ಎಂ ಎಸ್ ರವಿಶಂಕರ್ ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಇ) ಎಂದು, ದಾವಾ ಆಸ್ತಿಗೆ ಸಂಬಂದಪಟ್ಟ 7 ಕಂಪ್ಯೂಟರೈಸ್ ಆರ್ ಟಿ ಸಿಯನ್ನು ಹಾಜರುಪಡಿಸಿದ್ದು

ಅದನ್ನು ನಿಪಿ-3 ರಿಂದ ನಿಪಿ-9 ಎಂದು, ಅಂಚೆ ರಶೀದಿಯನ್ನು ನಿಪಿ-10 ಎಂದು, Refused ಎಂದು ಹಿಂದಿರುಗಿರುವ ಅಂಚೆ ಕವರ್ ಅನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ವಾದಿ ಪ್ರತಿವಾದಿಗೆ ಬರೆದಿರುವ Notice ಪತ್ರದ ಪ್ರತಿ ಇದ್ದು ಮತ್ತು 25000 ರೂಪಾಯಿ ನೀಡಿದಂತಹ ಚೆಕ್ ನ ಜೆರಾಕ್ಸ್ ಪ್ರತಿ ಇದ್ದು ಸದರಿ ಅಂಚೆ ಕವರ್ ಅನ್ನು ನಿಪಿ-11 ಎಂದು ಅದರ ಒಳಗೆ ಇರುವ ನೋಟೀಸ್ ಅನ್ನು ನಿಪಿ-11 (ಎ) ಎಂದು, ವಾದಿ ಪ್ರತಿವಾದಿಗೆ ಬರೆದಿರುವ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, 1 ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು, Refused ಎಂದು ಹಿಂದಿರುಗಿರುವ Reminder notice ನ ಅಂಚೆ ಕವರ್ ಅನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ವಾದಿ ಪ್ರತಿವಾದಿಗೆ ಬರೆದಿರುವ Reminder Notice ಪತ್ರದ ಪ್ರತಿ ಇದ್ದು ಮತ್ತು 25000 ರೂಪಾಯಿ ನೀಡಿದಂತಹ ಚೆಕ್ ನ ಜೆರಾಕ್ಸ್ ಪ್ರತಿ ಇದ್ದು ಅಂಚೆ ಕವರ್ ಅನ್ನು ನಿಪಿ-14 ಎಂದು, ಅದರಲ್ಲಿರುವ ನೋಟೀಸ್ ಪ್ರತಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.